೨) ಮಿಣಜಗಿ.—ಈ ಗ್ರಾಮಕ್ಕೆ ಕಿರು ನೀರು ಸರಬರಾಜು ಯೋಜನೆಯನ್ನು ಕೊಳವೆ ಬಾವಿ ಜಲಮೂಲವಾಗಿ ತೆಗೆದುಕೊಂಡು ಕಾರ್ಯಗತ ಮಾಡಲಾಗಿತ್ತು, ಆದರೆ ಕೊಳವೆ ಬಾವಿಯು ನೀರು ಬತ್ತಿ ಹೋದುದರಿಂದ ನೀರು ಸರಬರಾಜು ಸ್ಥಗಿತಗೊಂಡಿತು. ತದನಂತರ ಇನ್ನೊಂದು ಕೊಳವೆ ಬಾವಿಯನ್ನು ಭೂಗರ್ಭ ಶಾಸ್ತ್ರಜ್ಞರ ಪರಿಶೀಲನೆಯ ಆಧಾರದ ಮೇಲೆ ಕೊರೆಯಲಾಯಿತು. ಆದರೆ ಅದರ ನೀರಿನ ಸಲೆಯೂ ಕಡಿಮೆ ಬಂದಿತು. ಹೀಗಾಗಿ ಆ ಕೊಳವೆ ಬಾವಿಯೂ ನಿಷ್ಪ್ರಯೋಜನವಾಯಿತು. ಇನ್ನೊಂದು ಕೊಳವೆ ಬಾವಿ ಮತ್ತು ಪೈಪ್‌ಲೈನ್ ಹಾಕುವ ಪ್ರಸ್ತಾಪವಿದ್ದು ಅದರ ಅಂದಾಜು ವೆಚ್ಚ ೫೦,೦೦೦ ರೂಗಳಿದ್ದು ಮುಂದಿನ ಕ್ರಮ ಕೈಗೊಳ್ಳಲಾಗುವುದು.

೩) ಬತ್ತಡ ಸರಡಗಿ.—ಈ ಗ್ರಾಮಕ್ಕೆ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯು ರೂ. ೨.೨೧ ಲಕ್ಷಕ್ಕೆ ಮಂಜೂರಾಗಿರುತ್ತದೆ, ಈ ಯೋಜನೆಯ ಕಾಮಗಾರಿಗಳು ಪ್ರಗತಿಯ ವಿವಿಧ ಹಂತಗಳಲ್ಲಿವೆ. ಈ ಯೋಜನೆಯು ಜಲಮೂಲವಾದ ತೆರೆದ ಬಾವಿಯನ್ನು ಭೀಮಾ ನದಿಯ ದಂಡೆಯ ಹತ್ತಿರ ಕೈಗೆತ್ತಿಕೊಳ್ಳಲಾಗಿದೆ ಮತ್ತು ಇದರ ಕೆಲಸವು ಪ್ರಗತಿಯಲ್ಲಿದೆ. ಈ ಬಾವಿಯಲ್ಲಿ ನೀರಿನ ಇಳುವರಿ ಹೆಚ್ಚು ಪಡಿಸುವ ಸೂಚನೆಗಳಿದ್ದು ಬಾವಿಯ ಕೆಲಸವನ್ನು ಪೂರ್ತಿಗೊಳಿಸಿದ ಮೇಲೆ ಯೋಜನೆಯನ್ನು ಕಾರ್ಯಗತ ಮಾಡಿದಾಗ ಈ ಗ್ರಾಮದ ನೀರಿನ ಸಮಸ್ಯೆ ಬಗೆಹರಿಯುವುದು ಈ ಗ್ರಾಮದ ನೀರು ಸರಬರಾಜು ಯೋಜನೆಯನ್ನು ಡಿಸೆಂಬರ್ ೧೯೮೭ರ ಹೊತ್ತಿಗೆ ಸಂಪೂರ್ಣಗೊಳಿಸಲಾಗುವುದು.

ಈ ಮೇಲ್ಕಾಣಿಸಿದ ಸದರಿ ಎರಡು ಗ್ರಾಮಗಳಿಗೆ ಅಂದರೆ ಕೌಲಗಾ 'ಕೆ' ಮತ್ತು ಮಿಣಜಗಿ ಗ್ರಾಮಗಳಿಗೆ ಬೇಸಿಗೆಯಲ್ಲಿ ತೊಂದರೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ.ಬಿ. ಶಾಣಪ್ಪ.—೧೯೮೩ನೇ ಸಾಲಿನಿಂದಲೂ, ಅಂದರೆ ಕಳೆದ ನಾಲ್ಕು ವರ್ಷಗಳಿಂದಲೂ ಈ ಗ್ರಾಮಗಳ ಬಗ್ಗೆ ಅನೇಕ ಸಲ ಚರ್ಚೆ ಮಾಡಿದ್ದೇನೆ. ನಮ್ಮ ಭಾಗ ಭೀಮಾ ದಂಡೆ ನಾಲೆ ಪತ್ತಿರ ಬರುತ್ತದೆ, ಸುಮಾರು ೪೦-೪೫ ಹಳ್ಳಿಗಳು ನನ್ನ ಕ್ಷೇತ್ರದಲ್ಲಿ ಬರುತ್ತವೆ. ಈ ಮೂರು ಗ್ರಾಮಗಳ ಬಗ್ಗೆ ನಾಲ್ಕು ವರ್ಷಗಳಿಂದಲೂ ಜನರು ಸತತವಾಗಿ ಹೋರಾಟ ಮಾಡಿ ಡಿ.ಸಿ, ವಾಪನವನ್ನು ನಿಲ್ಲಿಸಿ ಪ್ರತಿಭಟನೆ ಮಾಡಿದರೂ ಇದುವರೆಗೂ ನೀರು ಸಿಕ್ಕಿಲ್ಲ. ೧೯೮೭ನೇ ಇಸವಿಯಲ್ಲಿ ನೀರನ್ನು ಕೊಡಿಸುತ್ತೇವೆ ಎಂದು ಹೇಳಿದ್ದರೂ ಸಹ ಈಗ ಬೇಸಿಗೆಯಲ್ಲಿ ನೀರು ಸಿಕ್ಕುವುದಿಲ್ಲ. ಆದ್ದರಿಂದ ಕೂಡಲೇ ನೀರು ಕೊಡಿಸುವ ಪ್ರಯತ್ನ ಮಾಡಬೇಕು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಸದಸ್ಯರ ಕಳವಳ ನನಗೆ ಅರ್ಥವಾಗಿದೆ. ಮುಂದಿನ ವರ್ಷ ಎನ್ನುವ ಬದಲಾಗಿ ಈ ವರ್ಷವೇ ೬೦ ಸಾವಿರ ರೂಪಾಯಿ ಮಂಜೂರಾತಿ ಕೊಟ್ಟು ಈ ವರ್ಷವೇ ಮಾಡಲಿಕ್ಕೆ ಆದೇಶ ಕೊಡುತ್ತೇನೆ.

ಮೈಸೂರು ನಗರದ ಬಡಾವಣೆಗಳಲ್ಲಿ ನಾಗರೀಕ ಸೌಲಭ್ಯಗಳಿಲ್ಲದಿರುವ ಬಗ್ಗೆ

೬೨ (೩೨೭) ಶ್ರೀ ಪಿ.ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಮೈಸೂರು ನಗರದ ಎಲ್ಲೆಯೊಳಗೆ ಸೇರಿರುವ ಗ್ರಾಮಗಳು ಬಹಳ ವರ್ಷಗಳಾದವಾಗ್ಯೂ ಕೂಡ ವಾಸ್ತವವಾಗಿ ಆ ಹಳ್ಳಿಗಳ ಸುತ್ತಲಿರುವ ಬಡಾವಣೆಗಳಿಗಿರುವ ನಾಗರೀಕ ಸೌಲಭ್ಯಗಳನ್ನು ಒದಗಿಸದಿರಲು ಕಾರಣವೇನು ? ಸೌಲಭ್ಯಗಳನ್ನು ಒದಗಿಸಲು ಇನ್ನೆಷ್ಟು ಕಾಲ ಬೇಕಾಗುತ್ತದೆ ಆ ದಿಸೆಯಲ್ಲಿ ಎನಾದರೂ ಕ್ರಮ ಕೈಗೊಳ್ಳಲಾಗುತ್ತದೆಯೆ?

ಆ) ಮೈಸೂರು ನಗರದ ಬಡಾವಣೆಗಳಿಗೆ ನೀರಿನ ಕೊರತೆಯನ್ನು ಪೂರೈಸಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ಅದೇ ರೀತಿ ನೀರಿನ ವಿತರಣೆಯೂ ಕೂಡ ಸರಿಯಾಗಿಲ್ಲದಿರಲು ಕಾರಣವೇನು ?

ಪ್ರೊ॥ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಮಂತ್ರಿಗಳು).—

ಅ) ಮೈಸೂರು ನಗರಪಾಲಿಕೆಯ ಅಧಿಕಾರ ವ್ಯಾಪ್ತಿಗೆ ಬರತಕ್ಕ ಎಲ್ಲಾ ಹಳ್ಳಿಗಳಿಗೂ ನೀರು, ದೀಪ, ಒಳಚರಂಡಿ ಮುಂತಾದ ಸೌಲಭ್ಯಗಳನ್ನು ನಗರಪಾಲಿಕೆಯ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹಂತ ಹಂತವಾಗಿ ಒದಗಿಸಲಾಗುತ್ತಿದೆ.

(ಆ) ಕರ್ನಾಟಕ ಗೃಹನಿರ್ಮಾಣ ಮಂಡಳಿ, ನಗರ ವಿಶ್ವಸ್ಥ ಮಂಡಳಿ, ಹಾಗೂ ಮೈಸೂರು ಮಹಾ ನಗರಪಾಲಿಕೆಯವರು ನಿರ್ಮಾಣ ಮಾಡುವ ಹೊಸ ಬಡಾವಣೆಗಳಿಗೆ ಕಾವೇರಿ ನದಿಯ ನೀರನ್ನು ಅಥವಾ ಕೊಳವೆ ಬಾವಿಗಳನ್ನು ಕೊರೆದು ಮತ್ತು ವಿತರಣಾ ವ್ಯವಸ್ಥೆಯನ್ನು ಒದಗಿಸಿ, ಕರ್ನಾಟಕ ಜಲಮಂಡಳಿಯು ನೀರನ್ನು ಪೂರೈಸುತ್ತಿದೆ. ಇದರ ಜೊತೆಗೆ ಅಭಾವ ಪರಿಹಾರ ಕಾಮಗಾರಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ನಗರದ ಹಳೆಯ ಪ್ರದೇಶದಲ್ಲಿ ನಗರಪಾಲಿಕೆಯು ಕೋರಿಕೆಯ ಮೇರೆಗೆ ಕೊಳವೆ ಮಾರ್ಗಗಳನ್ನು ಹಾಕಲಾಗುತ್ತಿದೆ. ಮೈಸೂರು ನಗರದ ಎರಡನೇ ಮತ್ತು ಮೂರನೆಯ ಹಂತದ ನೀರು ಸರಬರಾಜು ವ್ಯವಸ್ಥೆಗಳಿಗೆ ಸಂಪರ್ಕ ಕಲ್ಪಿಸಲು ೨೯.೪೦ ಲಕ್ಷ ರೂಪಾಯಿಗಳ ಯೋಜನೆ ತಯಾರಾಗಿದ್ದು, ಇದನ್ನು ಕಾರ್ಯಗತ ಮಾಡಲಾಗುತ್ತಿದೆ. ಈ ಯೋಜನೆ ಪೂರ್ಣ ಗೊಂಡಾಗ ಹಲವು ಪ್ರದೇಶಗಳಲ್ಲಿ ನೀರು ಸರಬರಾಜು ಉತ್ತಮಗೊಳ್ಳುವುದು. ಮೈಸೂರು ನಗರದ ವಿತರಣಾ ವ್ಯವಸ್ಥೆಯನ್ನು ಪುನರ್ ರೂಪಿಸಲು ಒಂದು ಸಮಗ್ರ ಯೋಜನೆಯನ್ನು ೧೯೮೦–೮೧ರ ದರ ಪಟ್ಟಿಯ ಆಧಾರದ ಮೇಲೆ ೮.೫ ಕೋಟಿ ರೂ.ಗಳ ಅಂದಾಜನ್ನು ತಯಾರಿಸಲಾಗಿದ್ದು, ಈ ಯೋಜನೆಯನ್ನು ೭ನೇ ಪಂಚವಾರ್ಷಿಕ ಯೋಜನೆಯ ಕಾರ್ಯ ಕ್ರಮದಲ್ಲಿ ಸೇರಿಸಲಾಗಿದೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಅಧ್ಯಕ್ಷರೆ, ಮೈಸೂರು ನಗರದ ವ್ಯಾಪ್ತಿಯಲ್ಲಿ ಬರತಕ್ಕ ಸುಮಾರು ೧೨ ಹಳ್ಳಿಗಳಿವೆ. ಈ ೧೨ ಹಳ್ಳಿಹಳ್ಳಿಲ್ಲಿರುವ ಜನರಿಗೆ ನಾಗರೀಕ ಸೌಲಭ್ಯಗಳು ಎಷ್ಟರ ಮಟ್ಟಿಗೆ ಸಿಕ್ಕುತ್ತಿವೆ ಎಂಬುದನ್ನು ತಿಳಿಸಬೇಕೆಂದು ನಾನು ಪ್ರಶ್ನೆಯನ್ನು ಕೇಳಿದ್ದೆ. ನೀರು, ದೀಪಗಳನ್ನು ಒದಗಿಸಿಕೊಟ್ಟರೆ ಅದು ನಾಗರೀಕ ಸೌಲಭ್ಯ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಇದು ಸಂಪೂರ್ಣವಾದ ಸೌಲಭ್ಯವಾಗುವುದಿಲ್ಲ. ಈ ಗ್ರಾಮಗಳು ಕಳೆದ ಸುಮಾರು ೭೦–೮೦ ವರ್ಷ ಗಳಿಂದಲೂ ಗ್ರಾಮಗಳಾಗಿ ಉಳಿದುಕೊಂಡು ಬರುತ್ತಿವೆಯೇ ಹೊರತು ಮೈಸೂರು ನಗರದ ಜನರಿಗೆ ದೊರೆಯುತ್ತಿರುವ ಸೌಲಭ್ಯ, ಸೌಕರ್ಯಗಳು ದೊರೆಯುತ್ತಿಲ್ಲ. ಮೈಸೂರು ನಗರದಲ್ಲಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್, ಟೌನ್ ಪ್ಲಾನಿಂಗ್ ಆಫೀಸ್ ಮತ್ತು ಕಾರ್ಪೋರೇಷನ್ ಈ ಮೂರು ಸಂಸ್ಥೆಗಳಿದ್ದರೂ ಕೂಡ ಈ ಹಳ್ಳಿಗಳನ್ನು ಉತ್ತಮಪಡಿಸುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ಗಳೇನೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮೈಸೂರು ನಗರವು ಬೇರೆ ನಗರಗಳಂತೆಯೇ ಬಹಳ ವೇಗವಾಗಿ ಬೆಳೆಯುತ್ತಿದೆ. ಈ ರೀತಿ ಬೆಳೆಯುತ್ತಿರತಕ್ಕ ವೇಗಕ್ಕನುಗುಣವಾಗಿ ಪೌರಸೌಲಭ್ಯಗಳನ್ನೂ ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಇದು ಸಾಧ್ಯವಾಗುತ್ತಿಲ್ಲ. ಇದಕ್ಕೆ ಮುಖ್ಯ ಕಾರಣ ಹಣ ಕಾಸಿನ ತೊಂದರೆ. ಮಾನ್ಯ ಸದಸ್ಯರು ಹೇಳುತ್ತಿರುವ ಯಾವ ಯಾವ ಭಾಗಗಳು ಅಂದರೆ ಹಳ್ಳಿಗಳು ಮೈಸೂರು ನಗರಸಭೆಯ ವ್ಯಾಪ್ತಿಯಲ್ಲಿ ಬರುತ್ತವೆಯೋ ಆ ಎಲ್ಲ ಪ್ರದೇಶಗಳಿಗೂ ಪೌರ ಸೌಲಭ್ಯ ಗಳನ್ನು ಹಂತಹಂತವಾಗಿ ಒದಗಿಸಿಕೊಡುವುದಕ್ಕೆ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ರಾಜ್ಯದಲ್ಲಿ ಜನತಾ ನಿವೇಶನ ಹಂಚಿಕೆ ವಿಚಾರ

೬೩(೪೩) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಹಸಿರು ಕಾರ್ಡು ಕೊಟ್ಟವರಿಗೆ ಹುಡ್ಕೋ ಮತ್ತು ಜನತಾ ಮನೆಯನ್ನು (ನಿವೇಶನ) ಮಂಜೂರು ಮಾಡಲು ತೊಂದರೆ ಇರುವುದು ಹಾಗು ಇದರಿಂದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಸಿರು ಕಾರ್ಡು ಮಂಜೂರು ಮಾಡಲು ಆದಾಯ ಪ್ರಮಾಣಪತ್ರ ಯಾವ ಮೊತ್ತದ್ದು ಇರಬೇಕು?

ಇ) ಹುಡ್ಕೋ ಹಾಗೂ ಜನತಾ ನಿವೇಶನ ಪಡೆಯಲು ಆದಾಯ ಪ್ರಮಾಣ ಪತ್ರದ ಅವಶ್ಯಕತೆ ಇದೆಯೇ ಹಾಗಿದ್ದಲ್ಲಿ ಯಾವ ಮೊತ್ತದ್ದು ಆದಾಯ ಪ್ರಮಾಣಪತ್ರವನ್ನು ಒತ್ತಾಯಿಸಿರುವುದರಿಂದ ರಾಜ್ಯದ ಎಲ್ಲಾ ಬಡವರಿಗೆ ಅನ್ಯಾಯ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದರೂ ಸಹ ಕ್ರಮ ಕೈಗೊಳ್ಳದಿರಲು ಕಾರಣವೇನು ?